26/09/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

“ಮಧುರ ಮಕ್ಕಳೇ - ಜ್ಞಾನದ ಒಂದು ಹನಿಯಾಗಿದೆ ತನ್ನನ್ನು ಆತ್ಮನೆಂದು ತಿಳಿಯುವುದು ಮತ್ತು ತಂದೆಯನ್ನು ನೆನಪು ಮಾಡಿ, ಇದೇ ಒಂದು ಹನಿಯಿಂದ ಮುಕ್ತಿ-ಜೀವನ್ಮುಕ್ತಿಯು ಪ್ರಾಪ್ತಿಯಾಗಬಹುದಾಗಿದೆ”

ಪ್ರಶ್ನೆ: ಯಾವ ಪುರುಷಾರ್ಥದಲ್ಲಿ ತನ್ನ ಮತ್ತು ಅನ್ಯರ ಉನ್ನತಿಯು ಸಮಾವೇಶವಾಗಿದೆ?

ಉತ್ತರ: 1. ನೆನಪಿನಲ್ಲಿರುವ ಪುರುಷಾರ್ಥ ಮಾಡಿ, ಇದರಲ್ಲಿಯೇ ತನ್ನ ಮತ್ತು ಅನ್ಯರ ಕಲ್ಯಾಣ ಸಮಾವೇಶವಾಗಿದೆ. ನೀವು ಮಕ್ಕಳು ನೆನಪಿನಲ್ಲಿ ಕುಳಿತುಕೊಳ್ಳುತ್ತೀರಿ ಅಂದರೆ ಅನ್ಯರಿಗೆ ಶಾಂತಿಯ ದಾನ ಮಾಡುವುದಾಗಿದೆ. 2. ಪರಸ್ಪರ ದೇಹಾಭಿಮಾನದ ದೇಹದ ಮಾತುಗಳನ್ನು ಬಿಟ್ಟು ಆತ್ಮಿಕ ಮಾತುಗಳನ್ನು ಆಡುವುದರಿಂದ ಉನ್ನತಿಯಾಗುತ್ತಾ ಇರುವುದು. ತಾವು ತಂದೆಯ ಪ್ರತ್ಯಕ್ಷತೆ ಮಾಡಬೇಕು. ಎಷ್ಟು ಪ್ರತ್ಯಕ್ಷ ಮಾಡುವಿರೋ ಅಷ್ಟು ಎಲ್ಲರಿಗೂ ಶಾಂತಿ ಮತ್ತು ಸುಖದ ಮಾರ್ಗವನ್ನು ತೋರಿಸುವಿರಿ, ಅಷ್ಟೇ ಬಹುಮಾನ ಸಿಗುವುದು.

ಗೀತೆ: ನೀವು ಪ್ರೀತಿಯ ಸಾಗರರಾಗಿದ್ದೀರಿ.....................

ಓಂ ಶಾಂತಿ. ಇದನ್ನು ಭಕ್ತಿಮಾರ್ಗದಲ್ಲಿ ಹಾಡುತ್ತಾ ಬಂದಿದ್ದೀರಿ, ಮಹಿಮೆ ಮಾಡುತ್ತಾ ಬಂದಿದ್ದೀರಿ. ಮಹಿಮೆ ಪರಮಪಿತ ಪರಮಾತ್ಮನದ್ದಾಗಿದೆ. ಹೇಗೆ ಭಕ್ತಿಮಾರ್ಗದಲ್ಲಿ ಅನೇಕ ಪ್ರಕಾರದಗಾಯನವಾಗುತ್ತದೆ, ಉತ್ಸವಗಳನ್ನು ಆಚರಿಸುತ್ತಾರೆ ಅದೂ ಸಹ ಗಾಯನವಾಗಿದೆ. ಯಾವುದೇ ಮನುಷ್ಯ, ಸಾಧು-ಸಂತ ಮುಂತಾದವರ ಗಾಯನವಾಗುವುದಿಲ್ಲ. ಹಾಡುತ್ತಾರೆ ಅವರು ಜ್ಞಾನಸಾಗರನಾಗಿದ್ದಾರೆ. ಒಂದು ಹನಿ ಸಿಕ್ಕಿದರೂ ಸಹ ನಾವು ಇಲ್ಲಿಂದ ಹೊರಟುಹೋಗುತ್ತೇವೆ ಎಂದು ಹಾಡುತ್ತಾರೆ. ಅಂದಾಗ ಎಲ್ಲಿಗೆ ಹೋಗುತ್ತಾರೆ? ಮುಕ್ತಿ ಅಥವಾ ಜೀವನ್ಮುಕ್ತಿಧಾಮಕ್ಕೆ. ಮಹಿಮೆಯಾಗುತ್ತಿರುತ್ತದೆ ಆದರೆ ಅವರ ಮಹಿಮೆಯನ್ನು ಯಾರೂ ತಿಳಿದುಕೊಂಡಿಲ್ಲ. ನೀವು ತಿಳಿದುಕೊಂಡಿದ್ದೀರಿ ಅದರಲ್ಲಿಯೂ ನಂಬರ್ವಾರ್ ಪುರುಷಾರ್ಥದನುಸಾರ. ಇಬ್ಬರೂ ತಂದೆಯರ ರಹಸ್ಯವನ್ನೂ ತಿಳಿಸಲಾಗಿದೆ -ಒಬ್ಬರು ಲೌಕಿಕ ತಂದೆಯಾಗಿದ್ದಾರೆ, ಅವರ ನೆನಪು ಬಂದರೆ ಅದಕ್ಕೆ ದೇಹಭಿಮಾನವೆಂದು ಹೇಳಲಾಗುವುದು. ಆತ್ಮಕ್ಕೆ ದೇಹವನ್ನು ಕೊಡುವ ತಂದೆಯೇ ನೆನಪಿಗೆ ಬರುತ್ತಾರೆ. ಆತ್ಮ ತನ್ನ ಆತ್ಮೀಕ ತಂದೆಯನ್ನು ಮರೆತು ಹೋಗುತ್ತದೆ. ಇದು ತಪ್ಪಾಗಿದೆ. ಹಾಗೆ ನೋಡಿದರೆ ಯಾವುದೇ ತಪ್ಪಾಗಿಲ್ಲ ಆದರೆ ಆತ್ಮವೇ ಪರಮಾತ್ಮನೆಂದು ಹೇಳುವುದು ತಪ್ಪಾಗಿದೆ. ಇದೂ ಹೇಳುತ್ತಾರೆ ನಾನು ಜೀವಾತ್ಮನಾಗಿದ್ದೇನೆ. ನನ್ನ ಆತ್ಮಕ್ಕೆ ಬೇಸರಗೊಳಿಸಬೇಡಿ. ಆತ್ಮವೇ ಬೇಸರವಾಗುತ್ತದೆಯಲ್ಲವೆ. ಆತ್ಮ ಗರ್ಭಜೈಲಿನಲ್ಲಿ ಶಿಕ್ಷೆಯನ್ನನುಭವಿಸುವಾಗ ಅದಕ್ಕೆ ಶರೀರದಲ್ಲಿ ದುಃಖದ ಅನುಭವವಾಗುತ್ತದೆ. ಸಾಕ್ಷಾತ್ಕಾರವನ್ನೂ ಸಹ ಸ್ಥೂಲರೂಪದಲ್ಲಿ ಮಾಡಿಸುತ್ತಾರೆ, ನಮಗೆ ದುಃಖವಾಗುತ್ತಿದೆ ಎಂದು ಆಗ ಅನುಭವ ಮಾಡುತ್ತಾರೆ. ಮಕ್ಕಳಿಗೆ ತಿಳಿಸಲಾಗಿದೆ - ಮೊದಮೊದಲು ನಾವಾತ್ಮಗಳಾಗಿದ್ದೇವೆ ಎಂದು ಅಭ್ಯಾಸ ಮಾಡಿ. ದೇಹಾಭಿಮಾನಿಗಳಾಗುವುದರಿಂದ ಇವರು ಚಿಕ್ಕಪ್ಪ, ಇವರು ಮಾವ ಆಗಿದ್ದಾರೆ ಎಂದು ಸಂಬಂಧಗಳು ನೆನಪಿಗೆ ಬರುತ್ತದೆ. ಶರೀರ ಇಲ್ಲವೆಂದರೆ ಯಾವುದೇ ಸಂಬಂಧವಿಲ್ಲ. ಆತ್ಮನದೇ ಜ್ಞಾನವಾಗಿದೆ. ಯಾರಿಗಾದರೂ ಮಹಾನ್ ಪರಮಾತ್ಮನೆಂದು ಹೇಳಲಾಗುತ್ತದೆಯೇ! ಯಾರಾದರೂ ಶರೀರ ಬಿಟ್ಟಾಗ ಅವರ ಆತ್ಮವನ್ನು ಕರೆಸಲಾಗುತ್ತದೆ. ಅವರ ಪರಮಾತ್ಮನನ್ನು ಕರೆಸಲಾಗುತ್ತದೆ ಎಂದು ಹೇಳಲಾಗುವುದಿಲ್ಲ. ಯಾವುದೇ ಪರಿಸ್ಥಿಯಲ್ಲಿಯೂ ಸಹ ಅವರನ್ನು ಪರಮಾತ್ಮನೆಂದು ಹೇಳಲು ಸಾಧ್ಯವಿಲ್ಲ ಹಾಗೂ ಪರಮಾತ್ಮನು ಜನನ-ಮರಣದಲ್ಲಿ ಬರುವುದಿಲ್ಲ. ಪರಮಾತ್ಮನು ಜನನ-ಮರಣರಹಿತನಾಗಿದ್ದಾರೆ. ಆದರೆ ಆತ್ಮವಂತೂ ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ ಇರುತ್ತದೆ. ಇದನ್ನು ತಿಳಿದುಕೊಂಡಿದ್ದೀರಿ, ಮೊದಮೊದಲು ದೇವಿ-ದೇವತೆಗಳ ಆತ್ಮಗಳಾಗಿದ್ದೆವು, 84 ಜನ್ಮಗಳೂ ಸಹ ಭಾರತದಲ್ಲಿಯೇ ಗಾಯನ ಮಾಡುತ್ತಾರೆ. ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ಜ್ಞಾನಸಾಗರ ತಂದೆಯು ಸಮ್ಮುಖದಲ್ಲಿ ಕುಳಿತುಕೊಂಡಿದ್ದಾರೆ, ಪತಿತ-ಪಾವನನನ್ನೇ ಜ್ಞಾನಸಾಗರನೆಂದು ಹೇಳುತ್ತಾರೆ. ಆ ತಂದೆಯನ್ನೇ ಜ್ಞಾನೇಶ್ವರನೆಂದು ಕರೆಯಲಾಗುತ್ತದೆ. ಈಶ್ವರನಲ್ಲಿ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನವಿದೆ, ಈಶ್ವರನೇ ಸೃಷ್ಟಿಯನ್ನು ರಚಿಸುತ್ತಾರೆ ಆದ್ದರಿಂದ ಅವರಿಗೆ ರಚನೆಯ ಜ್ಞಾನವಿದೆ. ರಚೈತನೆಂದು ಹೇಳುತ್ತಾರೆಂದರೆ ಅವಶ್ಯವಾಗಿ ರಚಿಸಿರುವ ಸೃಷ್ಟಿಯಿದೆ ಆದ್ದರಿಂದಲೇ ಹೇಳುವರಲ್ಲವೆ. ರಚಯಿತನನ್ನು ತಂದೆಯೆಂದು ಹೇಳಲಾಗುತ್ತದೆ. ಸಹೋದರಿ-ಸಹೋದರನಿಗೆ ರಚೈತನೆಂದು ಹೇಳುವುದಿಲ್ಲ. ರಚೈತನೆಂದು ಯಾವಾಗಲೂ ತಂದೆಗೆ ಹೇಳಲಾಗುತ್ತದೆ. ಮಕ್ಕಳಿಗೆ ಗೊತ್ತಿದೆ - ತಂದೆಯು ಈಗ ನಮ್ಮ ಸಮ್ಮುಖದಲ್ಲಿ ಕುಳಿತ್ತಿದ್ದಾರೆ. ಭಲೆ ಯಾರಾದರು ವಿದೇಶದಲ್ಲಿ ಕುಳಿತಿದ್ದರೂ, ಹೇಳುತ್ತಾರೆ ತಂದೆಯಿಂದ ನಾವು ದೂರವಿದ್ದೇವೆ ಎಂದು. ಆದರೆ ನೆನಪಂತೂ ಮಾಡುತ್ತಾರಲ್ಲವೆ. ನೀವೂ ಯಾವಾಗಲೂ ನೆನಪು ಮಾಡಬೇಕು ಆದರೆ ಲೌಕಿಕ ಸಂಬಂಧವನ್ನು ನೋಡಿ ಪಾರಲೌಕಿಕ ತಂದೆಯನ್ನು ಮರೆತುಬಿಡುತ್ತಾರೆ ಆದ್ದರಿಂದ ಬಾಬಾ ತಿಳಿಸುತ್ತಾರೆ ಏಳುತ್ತಾ-ಕುಳಿತುಕೊಳ್ಳುತ್ತಾ ತಂದೆಯನ್ನು ನೆನಪು ಮಾಡುವ ಅಭ್ಯಾಸ ಮಾಡಿ. ನಾನು ಆತ್ಮ ಈ ಶರೀರದಿಂದ ನಡೆಯುತ್ತೇನೆ. ಆತ್ಮದ ಜ್ಞಾನವಂತೂ ನಿಮಗಿದೆ. ಆತ್ಮಗಳು ಮತ್ತು ಪರಮಾತ್ಮ ಬಹಳ ಕಾಲ ಆಗಲಿ ಇದ್ದರು ಎಂಬುದೂ ಸಹ ಗೊತ್ತಿದೆ. ಆದರೆ ಪರಮಾತ್ಮಗಳು

ಪರಮಾತ್ಮನಿಂದ ಬಹಳ ಕಾಲ ಆಗಲಿದ್ದರು....... ಎಂದು ಹೇಳುವುದಿಲ್ಲ. ಆತ್ಮಗಳು ಮತ್ತು ಪರಮಾತ್ಮನೆಂದು ಹೇಳಲಾಗುತ್ತದೆ.

ಈಗ ತಂದೆಯು ಮಕ್ಕಳ ಸಮ್ಮುಖದಲ್ಲಿ ಕುಳಿತಿದ್ದಾರೆ. ತಮ್ಮ ಒಂದು ಹನಿ ಸಿಕ್ಕಿದರೂ ಸಾಕೆಂದು ಹೇಳುತ್ತಾರೆ. ಪರಮಪಿತ ಪರಮಾತ್ಮ ನಾವಾತ್ಮಗಳ ತಂದೆಯಾಗಿದ್ದಾರೆ. ಇದಕ್ಕೆ ಜ್ಞಾನವೆಂದು ಹೇಳಲಾಗುವುದು. ನಾನು ನೀವೆಲ್ಲಾ ಆತ್ಮಗಳ ತಂದೆಯಾಗಿದ್ದೇನೆ. ನನ್ನನ್ನೇ ಜ್ಞಾನಸಾಗರ, ಪತಿತ-ಪಾವನನೆಂದು ಪರಮಾತ್ಮನ ವಿನಃ ಮತ್ತ್ಯಾರಿಗೂ ಹೇಳುವ ಧೈರ್ಯವಿಲ್ಲ ಅಂದರೆ ಈ ಮಾತನ್ನು ಮತ್ತ್ಯಾರೂ ಹೇಳುವುದಿಲ್ಲ. ತಂದೆಯು ತಿಳಿಸುತ್ತಾರೆ - ನಾನು ನಿಮ್ಮ ತಂದೆಯಾಗಿದ್ದೇನೆ. ಈಗ ಮಹಾಭಾರಿ ಯುದ್ಧವೂ ಸಹ ನಿಂತಿದೆ. ಯಾದವ, ಕೌರವ, ಪಾಂಡವರೂ ಇದ್ದಾರೆ ಇದೆಲ್ಲವೂ ತಿಳಿಸುವುದರ ಮೇಲೆ ಆಧಾರಿತವಾಗಿದೆ. ಕೇವಲ ಚಿತ್ರವನ್ನೇ ನೋಡಿದರೆ ಅದನ್ನು ಎಲ್ಲಿಯವರೆಗೆ ಶಿಕ್ಷಕರು ತಿಳಿಸುವುದಿಲ್ಲವೋ ಅಲ್ಲಿಯವರೆಗೆ ಅದನ್ನು ಅರಿತುಕೊಳ್ಳುವುದು ಪರಿಶ್ರಮವಾಗಿದೆ. ಶಾಲೆಯಲ್ಲಿ,ಇದು ಭಾರತವಾಗಿದೆ ಇದು ಲಂಡನ್ ಆಗಿದೆ ಎಂದು ಶಿಕ್ಷಕರು ತಿಳಿಸುತ್ತಾರಲ್ಲವೆ. ತಿಳಿಸದ ವಿನಃ ಅರ್ಥವಾಗಲು ಸಾಧ್ಯವಿಲ್ಲ. ಒಂದುವೇಳೆ ನಕ್ಷೆಯಲ್ಲಿ ಅದರ ಹೆಸರನ್ನು ಓದಿದರೂ ಸಹ ಕೇವಲ ಹೆಸರನಷ್ಟೇ ಹೇಳಬಲ್ಲರು ಆದರೆ ಅದು ಎಲ್ಲಿದೆ, ಯಾರು ರಾಜ್ಯ ಮಾಡುತ್ತಾರೆ ಎಂಬುದು ಏನೂ ಅರ್ಥವಾಗುವುದಿಲ್ಲ. ಇಲ್ಲಿಯೂ ಸಹ ಪ್ರತಿಯೊಂದೂ ಮಾತನ್ನು ತಿಳಿದುಕೊಳ್ಳಬೇಕಾಗುತ್ತದೆ. ಇಂದಿನ ದಿನಗಳಲ್ಲಂತೂ ಬಹಳ ಆಡಂಭರವಿರಬೇಕು ಅದನ್ನು ನೋಡಿಯೇ ಬರುತ್ತಾರೆ. ಅಲ್ಲಿ ತಿಳಿಸಿಕೊಡುವವರೂ ಸಹ ಒಳ್ಳೆಯವರು ಬೇಕು. ಮಕ್ಕಳೇ, ತಿಳಿಸಿಕೊಡಬಹುದು ಇವರು ಜಗದಂಬಾ ಆಗಿದ್ದಾರೆ, ಎಲ್ಲರ ಮನೋಕಾಮನೆಗಳನ್ನು ಪೂರ್ಣ ಮಾಡುವವರಾಗಿದ್ದಾರೆ. ಕಾಮಧೇನು ಕುಳಿತಿದ್ದಾರೆ ಎಂದು ವೃಕ್ಷದ ಕೆಳಗಡೆ ತೋರಿಸುತ್ತಾರೆ ಅಂದಾಗ ಅವರೊಂದಿಗೆ ಮಿಲನ ಮಾಡುವುದಕ್ಕೋಸ್ಕರ ಬರುತ್ತಾರೆ. ಜಗತ್ಪಿತ ಇರುವರೆಂದರೆ ಅವಶ್ಯವಾಗಿ ಜಗತ್ತಿನ ಮಾತ್ರ ಇರಬೇಕಲ್ಲವೆ. ಆದರೆ ಜಗದಂಬಾ ಎಂದು ಇವರಿಗೆ ಹೇಳುತ್ತಾರೆ ಏಕೆಂದರೆ ಕಳಶವನ್ನು ಕೊಡಲಾಗುತ್ತದೆ. ಮುಖ್ಯವಾಗಿ ಜಗದಂಬಾರವರಿಗೆ ಕೊಡಲಾಗಿದೆ ಮತ್ತು ಅವರ ಸೈನ್ಯವೂ ಇದೆ.

ನೀವು ಮಕ್ಕಳು ಪ್ರದರ್ಶನಿ ಮಾಡುತ್ತೀರೆಂದರೆ ಅದರಲ್ಲಿ ತಿಳಿಸಲು ಬಹಳ ಒಳ್ಳೊಳ್ಳೆಯ ಮಕ್ಕಳುಬೇಕು. ತಂದೆಯು ತಿಳಿಸಿದ್ದಾರೆ - ಮುಖ್ಯ ಮಾತು ತಂದೆಯ ಪರಿಚಯ ಕೊಡುವುದಾಗಿದೆ. ಮೊಟ್ಟಮೊದಲು ತಿಳಿಸಿ, ಇಬ್ಬರು ತಂದೆಯರಿದ್ದಾರೆ - ಒಬ್ಬರು ನಿಮ್ಮ ಲೌಕಿಕ ತಂದೆಯಾಗಿದ್ದಾರೆ, ಇನ್ನೊಬ್ಬರು ನಿಮ್ಮ ಪಾರಲೌಕಿಕ ತಂದೆಯಾಗಿದ್ದಾರೆ. ಲೌಕಿಕ ತಂದೆಯಿಂದಂತೂ ಜನ್ಮ-ಜನ್ಮಾಂತರದಿಂದ ಹದ್ದಿನ ಆಸ್ತಿಯನ್ನು ಪಡೆಯುತ್ತಾ ಬಂದಿರಿ ಈಗ ಬೇಹದ್ದಿನ ಆಸ್ತಿಯನ್ನು ಪಡೆಯಿರಿ. ಬಹಳಷ್ಟು ಸಮಯ ಕಳೆದುಹೋಗಿದೆ ಇನ್ನು ಸ್ವಲ್ಪವೇ ಉಳಿದಿದೆ.... ವಿಕರ್ಮಗಳ ಹೊರೆಯು ತಲೆಯ ಮೇಲೆ ಬಹಳ ಇದೆ. ಯೋಗದಿಂದಲೇ ವಿಕರ್ಮ ವಿನಾಶವಾಗಲು ಸಾಧ್ಯ. ಇದೇನು ಚಿಕ್ಕಮ್ಮನ ಮನೆಯಂತಲ್ಲ. ಇನ್ನೂ ಅಲ್ಪಸ್ವಲ್ಪ ಲೆಕ್ಕಾಚಾರವು ಉಳಿದಿದೆ ಆದ್ದರಿಂದ ಅನುಭವಿಸಲಾಗುತ್ತದೆಯಲ್ಲವೆ. ಎಷ್ಟೊಂದು ಪರಿಶ್ರಮವಾಗುತ್ತದೆ ಒಂದುವೇಳೆ ಅಂತ್ಯದಲ್ಲಿ ಬರುತ್ತೀರೆಂದರೆ ಎಷ್ಟು ವಿಕರ್ಮ ವಿನಾಶ ಮಾಡಿಕೊಳ್ಳಬಲ್ಲಿರಿ ಪರಿಶ್ರಮವಲ್ಲವೆ. ಇದನ್ನು ನೀವೂ ಡಂಗೂರ ಸಾರಿಸಿ - ನಂತರ ಯಾರು ಈ ದೂರನ್ನು ಹೇಳಬಾರದು.ನೀವು ಹೇಳಬಹುದು ನಾವು ಡಂಗೂರವನ್ನು ಸಾರಿಸಿದೆವು, ಪತ್ರಿಕೆಗಳಲ್ಲಿ ಹಾಕಿಸುತ್ತಿದ್ದೆವು ಎಂದು. ಆದರೆ ಎಷ್ಟು ಸಾಧ್ಯವೋ ಅಷ್ಟು ಎಲ್ಲರಿಗೂ ನಿಮಂತ್ರಣ ಸಿಗಬೇಕು. ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯನ್ನು ಪಡೆಯುವ ಪುರುಷಾರ್ಥ ಮಾಡಿ, ಚೆನ್ನಾಗಿ ನಿಮಂತ್ರಣ ಪತ್ರಗಳನ್ನು ಹಂಚಿ ಎಲ್ಲದಕ್ಕಿಂತ ಹೆಚ್ಚಿನ ಸೇವೆ ದೆಹಲಿಯಲ್ಲಿ ಆಗುತ್ತದೆ ದೆಹಲಿಯೇ ಇಡೀ ಭಾರತದ ಸಿಂಹಾಸನವಾಗಿದೆ. ಅಲ್ಲಿ ಎಲ್ಲಾ ಪತ್ರಿಕೆಗಳ ಏಜೆಂಟರೂ ಇರುತ್ತಾರೆ. ಪತ್ರಿಕೆಗಳ ಮುಖಾಂತರವೂ ನಿಮಂತ್ರಣ ಕೊಡಬೇಕಾಗಿದೆ. ಲೌಕಿಕ ತಂದೆಯಿಂದಂತೂ ಜನ್ಮ-ಜನ್ಮಾಂತರದಿಂದ ಆಸ್ತಿಯನ್ನು ಪಡೆಯುತ್ತಾ ಬಂದಿರಿ, ಈಗ ಪಾರಲೌಕಿಕ ತಂದೆಯಿಂದ ಆಸ್ತಿಯನ್ನು ಪಡೆಯಿರಿ. ಯಾವ ವೈಕುಂಠವನ್ನು ನೆನಪು ಮಾಡುತ್ತೀರಿ ಅದರ ಆಸ್ತಿಯನ್ನು ಬಂದು ತಂದೆಯಿಂದ ಪಡೆಯಿರಿ. ಎಲ್ಲಾ ಪತ್ರಿಕೆಗಳಲ್ಲಿ ಹಾಕಿಸುತ್ತಾ ಹೋಗಿ - ಭಾರತವು ಶಿವತಂದೆಯ ಜನ್ಮಸ್ಥಾನವಾಗಿದೆ. ಎಲ್ಲರನ್ನೂ ಉದ್ಧಾರ ಮಾಡುವವರು ಒಬ್ಬ ತಂದೆಯಾಗಿದ್ದಾರೆ. ಅಂದಮೇಲೆ ಪರಮಪಿತ ಪರಮಾತ್ಮ, ಪತಿತ-ಪಾವನನ ಸ್ಥಾನವು ದೊಡ್ಡ ತೀರ್ಥಸ್ಥಾನವಾಯಿತಲ್ಲವೆ. ಆದರೆ ಇದು ಯಾರಿಗೂ ಗೊತ್ತಿಲ್ಲ. ಕ್ರೈಸ್ತ, ಇಬ್ರಾಹಿಂ, ಬುದ್ಧ ಮುಂತಾದವರೆಲ್ಲರೂ ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಈಗ ಅಂತಿಮ ಜನ್ಮದಲ್ಲಿದ್ದಾರೆ. ಕ್ರಿಶ್ಚಿಯನ್ನರು ಸ್ವತಃ ತಾವೇ ಹೇಳುತ್ತಾರೆ ಕ್ರೈಸ್ಟ್ ಇಲ್ಲಿಯೇ ಯಾವುದೋ ಜನ್ಮದಲ್ಲಿ ಇದ್ದಾರೆ. ಕ್ರಿಶ್ಚಿಯನ್ನರು ಸಹ ವೃಕ್ಷವನ್ನು ನಂಬುತ್ತಾರೆ ಇಲ್ಲವೆಂದರೆ ಇಷ್ಟೊಂದು ಆತ್ಮಗಳು ಎಲ್ಲಿಂದ ಬರುತ್ತಾರೆ ಅವಶ್ಯವಾಗಿ ವಿಭಾಗಗಳಿವೆ ಅಲ್ಲಿಂದ ಬರುತ್ತಾರೆ. ಇತಿಹಾಸವು ಖಂಡಿತವಾಗಿ ಪುನಃ ಪುನರಾವರ್ತನೆಯಾಗುವುದು. ಈ ವೃಕ್ಷವು ಬಹಳ ಒಳ್ಳೆಯ ಚಿತ್ರವಾಗಿದೆ. ಆದರೆ ಇದರ ಬೆಲೆ ಮಕ್ಕಳಲ್ಲಿ ನಂಬರ್‌ವಾರ್ ಇದೆ.

ಮಕ್ಕಳು ಅನ್ಯರಿಗೆ ತಿಳಿಸಲು ಪ್ರದರ್ಶನಿ ಮುಂತಾದುವನ್ನು ಮಾಡುತ್ತೀರಿ. ಇದರಲ್ಲಿ ಯಾವುದೇ ಕಲೆಯ ಪ್ರದರ್ಶನ ಮಾಡಬಾರದು. ಆರ್ಟ್ ಗ್ಯಾಲರಿಗಳಲ್ಲಂತೂ ವ್ಯರ್ಥದ ಚಿತ್ರಗಳನ್ನು ಇಡುತ್ತಾರೆ. ತಿಳಿಯುತ್ತಾರೆ ಇದು ಒಂದು ಕಲೆಯಾಗಿದೆ ಎಂದು. ದೇವತೆಗಳ ಸಣ್ಣ ಸೊಂಟದ ವಿವಿಧ ಭಂಗಿಗಳ ಚಿತ್ರಗಳನ್ನು ರಚಿಸುತ್ತಾರೆ. ಅಲ್ಲಂತೂ ದೇವತೆಗಳಿಗೆ ಸ್ವಾಭಾವಿಕ ಸೌಂದರ್ಯವಿರುತ್ತದೆ. ಈ ಸಮಯದಲ್ಲಿ ಪಂಚ ತತ್ವಗಳೂ ಸಹ ತಮೋಪ್ರಧಾನವಾಗಿವೆ. ಸತ್ಯಯುಗದಲ್ಲಿ ಪಂಚತತ್ವಗಳೂ ಸಹ ಸತೋಪ್ರಧಾನವಾಗಿರುತ್ತವೆ. ಕೃಷ್ಣನನ್ನು ಶ್ಯಾಮ ಮತ್ತು ಸುಂದರನೆಂದು ಗಾಯನವಿದೆ. ಅಲ್ಲಿ ಶರೀರಕ್ಕಾಗಿ ಯಾವುದೇ ಚಿಕಿತ್ಸೆಯ

ಅವಶ್ಯಕತೆಯಿರುವುದಿಲ್ಲ. ಇಲ್ಲಂತೂ ಶರೀರವನ್ನು ಎಷ್ಟೊಂದು ಸಂಭಾಲನೆ ಮಾಡಲಾಗುತ್ತದೆ ನೋಡಿ. ಅಲ್ಲಂತೂ ವೃದ್ಧರಾದಾಗಲೂ ಸಹ ಹಲ್ಲು ಮುಂತಾದುವುಗಳು ಎಲ್ಲವೂ ಶಕ್ತಿಶಾಲಿಯಾಗಿರುತ್ತದೆ, ಹಲ್ಲುಗಳು ಉದುರಿಹೋದರೆ ಕೂರುಪಿಗಳಾಗಿಕಾಣುತ್ತಾರೆ. ಸತ್ಯಯುಗದಲ್ಲಿ 16 ಕಲಾ ಸಂಪೂರ್ಣರಾಗಿರುತ್ತಾರೆ. ಕುರುಡರು-ಕುಂಟರಾಗುವುದಿಲ್ಲ, ಇಲ್ಲಂತೂ ನೋಡಿ ಎಷ್ಟೊಂದು ಕುರುಡರು-ಕುಂಟರು ಜನ್ಮವನ್ನು ಪಡೆಯುತ್ತಾರೆ. ಅಂದಾಗ ನೀವು ಇಂತಹ ಸ್ವರ್ಗದ ಮಾಲೀಕರಾಗುತ್ತಿದ್ದೀರಿ ಒಬ್ಬ ಯಾತ್ರಿಕನೇ ಬಂದು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾರೆ. ನೀವೂ ಯಾತ್ರಿಕರು ಇಲ್ಲಿ ಪಾತ್ರವನ್ನಭಿನಯಿಸುತ್ತಾ ಅಭಿನಯಿಸುತ್ತಾ ಪತಿತರಾಗಿಬಿಡುತ್ತೀರಿ, ಆತ್ಮವು ಕಪ್ಪಾಗಿಹೋಗುತ್ತದೆ. ತಂದೆಯಂತೂ ಸದಾ ಸುಂದರನಾಗಿದ್ದಾರೆ, ಅವರಲ್ಲಿ ಎಂದೂ ತುಕ್ಕು ಬೀಳುವುದಿಲ್ಲ. ನಾನಂತೂ ಸತ್ಯ ಚಿನ್ನವಾಗಿದ್ದೇನೆ ಆದ್ದರಿಂದ ನನ್ನನ್ನು ಕರೆಯುತ್ತಾರೆ ಎಂದು ತಂದೆಯು ತಿಳಿಸುತ್ತಾರೆ. ಸದಾ ಪವಿತ್ರವಾಗಿರುವವರನ್ನೇ ಕರೆಯುತ್ತಾರೆ-ಬಾಬಾ ಬನ್ನಿ, ಬಂದು ನಮ್ಮನ್ನು ಸಹ ತಮ್ಮ ಸಮಾನರನ್ನಾಗಿ ಮಾಡಿ ಎಂದು. ನೀವು ಸದಾ ಪಾವನರಂತೂ ಆಗುವುದಿಲ್ಲ. ಬಾಕಿ ಸತೋಪ್ರಧಾನದಲ್ಲಂತೂ ಎಲ್ಲರು ಬರಬೇಕಾಗಿದೆ. ಆದರೆ ಅದರಲ್ಲಿಯೂ ಸಹ ನಂಬರ್ವಾರ್ ಇದ್ದಾರೆ. ನಾಟಕದಲ್ಲಿ ಭಿನ್ನ-ಭಿನ್ನ ಪಾತ್ರಧಾರಿಗಳಿರುತ್ತಾರಲ್ಲವೆ. ಕೆಲವರು ಪ್ರಧಾನ ನಾಯಕ-ನಾಯಕಿಯರಿದ್ದರೆ ಅವರಿಗೆ ಹಣವು ಸಹ ಹೆಚ್ಚಿಗೆ ಸಿಗುತ್ತದೆ. ಈಗಂತೂ ಸರ್ಕಾರವು ಎಲ್ಲರ ಹಣವನ್ನು ಹಿಡಿಯುತ್ತಿರುತ್ತದೆ. ಆದ್ದರಿಂದಲೇ ಹೇಳಲಾಗುತ್ತದೆ-ಕೆಲವರದು ಮಣ್ಣುಪಾಲಾಗುತ್ತದೆ ಇನ್ನೂ ಕೆಲವರದು ರಾಜನ ಪಾಲಾಗುತ್ತದೆ ಆದರೆ ಯಾರು ಮಾಲೀಕನ ಹೆಸರಿನಲ್ಲಿ ಖರ್ಚು ಮಾಡುತ್ತಾರೆ ಅವರದೇ ಸಫಲವಾಗುತ್ತದೆ.......... ಏಕೆಂದರೆ ಮಾಲೀಕ ತಂದೆಯು ಸ್ವರ್ಗದ ಸ್ಥಾಪನೆ ಮಾಡಲು ಬಂದಿದ್ದಾರೆ. ಯಾರು ತಂದೆಗೆ ಸಹಯೋಗಿಗಳಾಗುತ್ತಾರೆಯೋ ಅವರ ಸಂಪತ್ತು ಸುರಕ್ಷಿತವಾಗಿರುತ್ತದೆ. ನಿಮಗಂತೂ ಅಲ್ಲಿ ಅಪಾರವಾದ ಸಂಪತ್ತಿರುತ್ತದೆ. ಎಷ್ಟೊಂದು ಚಿನ್ನ, ವಜ್ರರತ್ನಗಳಿರುತ್ತದೆ ! ಆದರೆ ನಿಮಗೆ ಅದರ ಯಾವುದೇ ಚಿಂತೆಯಿರುವುದಿಲ್ಲ. ಏಕೆಂದರೆ ಅಲ್ಲಿ ನಿಮ್ಮನ್ನು ಯಾರು ಲೂಟಿ ಮಾಡುವುದಿಲ್ಲ. ಚಿನ್ನ ವಜ್ರ ಇತ್ಯಾದಿಗಳ ಹೊಸ ಹೊಸ ಗಣಿಗಳೆಲ್ಲವೂ ನಿಮಗೆ ಸಿಗುತ್ತವೆ. ವಜ್ರಗಳು ಕಲ್ಲುಗಳ ರೀತಿಯಲ್ಲಿ ಬಿದ್ದಿರುತ್ತವೆ. ಇವೆಲ್ಲವೂ ನಿಮಗೆ ಸಿಗಲಿದೆ. ಹೇಗೆ ಇಲ್ಲಿ ಇಟ್ಟಿಗೆ ಮಹಲುಗಳಾಗುತ್ತವೆಯೋ ಹಾಗೆಯೇ ಅಲ್ಲಿ ಚಿನ್ನದ ಮಹಲುಗಳನ್ನು ತಯಾರಿಸಲಾಗುತ್ತದೆ. ಸಾಹುಕಾರ ಪ್ರಜೆಯೂ ಕೂಡ ಚಿನ್ನದ ಮಹಲುಗಳನ್ನು ಕಟ್ಟಿಸುವರು ಯಾರು ಪೂರ್ಣ ದಾನಿಗಳಾಗಿರುತ್ತಾರೆ ಅವರು ಸಹ ಚಿನ್ನದ ಮಹಲುಗಳನ್ನು ಮಾಡಿಸುತ್ತಾರೆ. ಬಾಬಾ ಈ ಎಲ್ಲಾ ಮಾತುಗಳನ್ನು ತಿಳಿಸುತ್ತಿರುತ್ತಾರೆ. ನೀವು ಹಸಿವಿನಿಂದ ಇರಿ ಎಂದು ಹೇಳುವುದಿಲ್ಲ. ಮಕ್ಕಳನ್ನೂ ಸಂಭಾಲನೆ ಮಾಡಬೇಕು. ರಚೈತನ ಕರ್ತವ್ಯವೇ ಆಗಿದೆ ಸಂಭಾಲನೆ ಮಾಡುವುದು, ದುಃಖಿಗಳನ್ನಾಗಿ ಮಾಡಬಾರದು. ಹಸಿವಿನಿಂದ ಇರಿಸಬಾರದು, ದಯಾಹೃದಯಿಗಳಾಗಬೇಕಾಗಿದೆ. ಮನುಷ್ಯರು ಎಷ್ಟು ದುಃಖಿಗಳಾಗಿದ್ದಾರೆ, ನೀವು ತಿಳಿದಿರುವಿರಿಕ್ಷಾಮ ಬಂದರೆ ಬಹಳ ದುಃಖಿಯಾಗುತ್ತಾರೆ, ತ್ರಾಹಿ-ತ್ರಾಹಿ ಎನ್ನುತ್ತಾರೆ ಇದರ ನಂತರ ಜಯಜಯಕಾರವಾಗುವುದು ಎಲ್ಲಾ ಆತ್ಮಗಳಿಗೆ ಸುಖ ಸಿಕ್ಕಿಬಿಡುವುದು. ತಂದೆಯು ದುಃಖಹರ್ತ-ಸುಖಕರ್ತನಾಗಿದ್ದಾರೆ. ಸುಖವು ಎರಡೂ ಕಡೆ ಇರುತ್ತದೆ - ಒಂದು ಶಾಂತಿಧಾಮದಲ್ಲಿ ಇರುವುದು ಮತ್ತೊಂದು ಸುಖಧಾಮದಲ್ಲಿರುವುದು. ಸುಖಧಾಮದಲ್ಲಿ ಪವಿತ್ರತೆ, ಸುಖ-ಶಾಂತಿ ಎಲ್ಲವೂ ಇರುತ್ತದೆ ತಂದೆಯು ತಿಳಿಸುತ್ತಾರೆ ನಾನು ಕಲ್ಪ-ಕಲ್ಪವೂ ಬರುತ್ತೇನೆ. ಮನುಷ್ಯರು ಯಾವಾಗ ಬಹಳ ದುಃಖಿಯಾಗಿ ಬಿಡುತ್ತಾರೆ ಆ ಸಮಯದಲ್ಲೇ ನನ್ನ ಪಾತ್ರವಾಗಿದೆ. ಆದ್ದರಿಂದ ನನ್ನ ಹೆಸರೆ ಆಗಿದೆ - ದುಃಖಹರ್ತ-ಸುಖಕರ್ತ, ಸರ್ವರ ಶಾಂತಿದಾತ, ಸುಖದಾತ.

ನೀವು ತಿಳಿದಿರುವಿರಿ- ನಾವು ತಂದೆಯ ಜೊತೆ ಎಲ್ಲರಿಗೆ ಶಾಂತಿಯ ದಾನ ಮಾಡುತ್ತೇವೆ. ಎಷ್ಟು ನೆನಪಿನಲ್ಲಿರುವಿರೋ ಅಷ್ಟು ಅನ್ಯರಿಗೆ ದಾನ ಮಾಡುತ್ತಾ ಇರುವಿರಿ. ಸುಖಕ್ಕೋಸ್ಕರವೇ ಜ್ಞಾನವನ್ನು ಕೊಡಲಾಗುವುದು. ಮಕ್ಕಳು ಮಾತಾಪಿತಾರವರ ಪ್ರತ್ಯಕ್ಷತೆಯನ್ನು ಮಾಡಬೇಕು. ಎಷ್ಟು ಪ್ರತ್ಯಕ್ಷತೆಯನ್ನು ಮಾಡುತ್ತೀರಿ ಎಷ್ಟು ಸುಖ-ಶಾಂತಿಯ ಮಾರ್ಗ ಅನೇಕರಿಗೆ ತಿಳಿಸುತ್ತೀರಿ, ಅಷ್ಟು ಬಹುಮಾನ ಸಿಗುವುದು. ತಂದೆಯು ನಿಮಗೆ ಎಷ್ಟೆಲ್ಲಾ ಹೊಸ ಪ್ರಪಂಚದ ಹೊಸ-ಹೊಸ ಮಾತುಗಳನ್ನು ತಿಳಿಸುತ್ತಾರೆ. ಹಳೆಯ ಪ್ರಪಂಚ ಮತ್ತು ಹೊಸ ಪ್ರಪಂಚ ಎರಡರ ಸಾಕ್ಷಾತ್ಕಾರ ಮಾಡಿಸುತ್ತಾರೆ. ಇನ್ನೂ ಹೆಚ್ಚಿಗೆ ಸಾಕ್ಷಾತ್ಕಾರ ಮಾಡಿಸುತ್ತಾರೆ ಆದರೆ ಯಾರು ತಂದೆಯ ಪಕ್ಕಾ ಸತ್ಯ ಮಕ್ಕಳಾಗಿರುತ್ತಾರೆಯೋ ಅವರಿಗೆ ಮಾತ್ರ, ಸತ್ಯ ಹೃದಯದವರಿಗೆ ತಂದೆಯು ರಾಜಿಯಾಗುತ್ತಾರೆ. ನೀವು ಬಹಳಷ್ಟು ನೋಡುತ್ತೀರಿ, ಹೇಗೆ ಪ್ರಾರಂಭದಲ್ಲಿಯೂ ತೋರಿಸಿದ್ದೇನೆ ನಂತರ ಅಂತ್ಯದಲ್ಲಿಯೂ ತೋರಿಸುತ್ತೇನೆ. ಎಷ್ಟೊಂದು ಸಾಕ್ಷಾತ್ಕಾರವನ್ನು ಮಾಡಿಸುತ್ತಿದ್ದೆವು ಎಷ್ಟು ಕಿರೀಟ ಇತ್ಯಾದಿಗಳನ್ನು ಧರಿಸುತ್ತಿದ್ದೆವು ಹಾಗೆಯೇ ಪುನಃ ಭಿನ್ನ-ಭಿನ್ನ ಪ್ರಕಾರದಲ್ಲಿ ತೋರಿಸುತ್ತೇನೆ. ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ. ಅದೇ ಸಮಯದಲ್ಲಿ ದೇಶ ವಿಭಜನೆ ಆದಾಗ ಸಹ ಇಲಿಗೆ ಪ್ರಾಣ ಸಂಕಟವಾಗಿತ್ತಲ್ಲವೇ. ನಿಮಗೆ ಆಗ ಯಾವುದೇ ಚಿಂತೆಯಿರಲಿಲ್ಲ. ನೀವಂತೂ ಬದುಕ್ಕಿದ್ದು ಸತ್ತಂತೆಯಿದ್ದಿರಿ. ಆದ್ದರಿಂದ ಬಾಬಾ ತಿಳಿಸುತ್ತಾರೆ-ಮಕ್ಕಳೇ, ಪೂರ್ಣ ಪರಿಶ್ರಮ ಪಡಿ, ಪುರುಷಾರ್ಥ ಮಾಡಿ, ನಾವು ಆತ್ಮಗಳಾಗಿದ್ದೇವೆ. ಪರಸ್ಪರರೊಂದಿಗೆ ಆತ್ಮಿಕ ಮಾತುಗಳನ್ನೇ ಆಡುತ್ತಾ ಇರಿ. ಶಾರೀರಿಕ ದೇಹಾಭಿಮಾನದ ಮಾತುಗಳು ಸಮಾಪ್ತಿಯಾಗಲಿ. ಯಾರು ಆಶ್ಚರ್ಯವಾಗಿ ಇಲ್ಲಿಂದ ಓಡಿಹೋಗುತ್ತಾರೆ ಅವರು ಇದೇನನ್ನೂ ನೋಡುವುದಿಲ್ಲ. ಹಿಂದೆನಡೆದದ್ದನ್ನೂ ನೀವು ನೋಡಿದ್ದೀರಿ ಮತ್ತು ಮುಂದೆ ಹೊಸದಾಗಿ ನಡೆಯುವುದೋ ಅದನ್ನೂ ನೋಡುತ್ತೀರಿ. ಮಧುರಾತಿ ಮಧುರ ಮಕ್ಕಳನ್ನು ತಂದೆ ತುಂಬಾ ಪ್ರೀತಿ ಮಾಡುತ್ತಾರೆ. ಪ್ರೀತಿಯ ಮಕ್ಕಳಿಗೆ ಬಹಳ ಪ್ರೀತಿ ಸಿಗುತ್ತದೆ. ಯಾರು ಒಳ್ಳೆಯ ಸೇವೆ ಮಾಡುತ್ತಾರೆಯೋ ಅವರಿಗೆ ಪ್ರೀತಿಯು ಸಿಗುವುದು, ಪದವಿಯೂ ಸಿಗುವುದು. ಮರೆಯಬೇಡಿ ನಾವಾತ್ಮಗಳಿಗೆ ನಿರಾಕಾರ

ಪರಮಪಿತ ಪರಮಾತ್ಮ ಶಿಕ್ಷಣವನ್ನು ಕೊಡುತ್ತಿದ್ದಾರೆ, ಸ್ವರ್ಗದ ವಾರಸುದಾರರನ್ನಾಗಿ ಮಾಡುತ್ತಿದ್ದಾರೆ. ಅಂದಮೇಲೆ ದೈವೀ ಗುಣವಂತರು ಆಗಬೇಕು. ಹಿಂದೆ ಎಲ್ಲರಲ್ಲೂ ಆಸುರೀ ಗುಣಗಳಿತ್ತು ಈಗಂತೂ ಬಾಬಾ ಸಮ್ಮುಖದಲ್ಲಿ ಕುಳಿತಿದ್ದಾರೆ, ಯಾರಿಂದ ಆಸ್ತಿಯು ಸಿಗುತ್ತದೆಯೋ, ಅವರೊಂದಿಗೆ ಪ್ರೀತಿಯಿರುತ್ತದೆ, ದಲ್ಲಾಳಿಯೊಂದಿಗಲ್ಲ. ದಲ್ಲಾಳಿಯಂತೂ ಮಧ್ಯದಲ್ಲಾದರು. ಸಂಪಾದನೆಯು ನಿಮಗೆ ತಂದೆಯಿಂದ ಸಿಗುತ್ತದೆ. ಆದ್ದರಿಂದ ತಂದೆಯನ್ನು ನೆನಪು ಮಾಡಿ. ದೇಹಾಭಿಮಾನವನ್ನು ಬಿಡುತ್ತಾ ಹೋಗಿ. ನನ್ನವರಂತೂ ಒಬ್ಬ ಬಾಬಾನ ವಿನಃ ಬೇರೆ ಯಾವುದೇ ದೇಹಾಧಾರಿಗಳು ನೆನಪಿಗೆ ಬರಬಾರದು. ಇಲ್ಲಿ ಬಾಬಾ ಹಳೆಯ ಬೂಟ್(ಬ್ರಹ್ಮಾ) ನಲ್ಲಿ ಬಂದಿದ್ದಾರೆ. ನಾನು ಇವರನ್ನು ಲೋನ್ ಆಗಿ ತೆಗೆದುಕೊಂಡಿದ್ದೇನೆ. ಕಲ್ಪದ ಹಿಂದೆಯೂ ಈ ಶಬ್ಧವನ್ನು ಹೇಳಿದ್ದೆನು, ಈಗಲೂ ಹೇಳುತ್ತಿದ್ದೇನೆ. ಇಂದಿನ ದಿನವೇ ನಿಮಗೆ ತಿಳಿಸಿದ್ದೆನು ಪುನಃ ತಿಳಿಸುತ್ತೇನೆ. ಎಷ್ಟು ಒಳ್ಳೆಯ ವಿಶಾಲ ಬುದ್ಧಿಯಿರಬೇಕು. ಲಕ್ಷ್ಮಿ-ನಾರಾಯಣರು ನಂಬರ್ವನ್ ಆಗಿದ್ದಾರೆ,ಅಂದರೆ ಖಂಡಿತವಾಗಿ ಒಳ್ಳೆಯ ಪ್ರಾಲಬ್ಧವನ್ನು ಮಾಡಿಕೊಂಡಿರಬೇಕು. ಇದು ಪರಮಪಿತನ ವಿಮೋಚನಾಸೈನ್ಯವಾಗಿದೆ, ಇಡೀ ಪ್ರಪಂಚಕ್ಕೆ ಮುಕ್ತಿ-ಜೀವನ್ಮುಕ್ತಿಯ ವಿಮೋಚನೆಯನ್ನು ಕೊಡುವಂತಹದ್ದಾಗಿದೆ. ಸರ್ವರ ಸದ್ಗತಿದಾತ, ರಾಮನಾಗಿದ್ದಾರೆ. ಇಡೀ ಪ್ರಪಂಚವೇ ಗತಿ ಅರ್ಥಾತ್ ಮುಕ್ತಿಧಾಮಕ್ಕೆ ಹೋಗಬೇಕಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯಜೊತೆ ಇಡೀ ವಿಶ್ವಕ್ಕೆ ಶಾಂತಿಯ ಧಾನ ನೀಡಬೇಕಾಗಿದೆ. ತಂದೆ ಸಮಾನ ದುಃಖಹರ್ತ ಸುಖಕರ್ತ ಆಗಬೇಕಾಗಿದೆ

2. ಒಬ್ಬ ತಂದೆಯ ಜೊತೆ ಪೂರ್ಣ ಪ್ರೀತಿ ಇಡಬೇಕು. ಪರಸ್ಪರ ದೇಹಾಭಿಮಾನದ ಮಾತನಾಡಬಾರದು. ಆತ್ಮೀಯ ಮಾತುಗಳನ್ನೇ ಆಡಬೇಕು.

ವರದಾನ: ಸಾಹಸದ ಸಂಕಲ್ಪದ ಮುಖಾಂತರ ಮಾಯೆಗೆ ನಿರಾಶೆ ಮಾಡುವಂತಹ ಸಾಹಸವಂತ ಭವ.

ಯಾವ ಮಕ್ಕಳು ಒಂದೇ ಬಲ ಒಂದೇ ಭರವಸೆಯಲ್ಲಿರುತ್ತಾರೆ, ನಾವು ವಿಜಯಿ ಆಗಲೇ ಬೇಕು ಎನ್ನುವ ಸಾಹಸದ ಸಂಕಲ್ಪ ಮಾಡುತ್ತಾರೆ, ಆಗ ಸಾಹಸವಂತ ಮಕ್ಕಳಿಗೆ ತಂದೆಯ ಸಹಾಯದ ಅನುಭವ ಆಗುತ್ತಿರುವುದು. ಸಾಹಸದಿಂದ ಸಹಾಯಕ್ಕೆ ಪಾತ್ರರಾಗಿ ಬಿಡುವರು. ಸಾಹಸದ ಸಂಕಲ್ಪದ ಮುಂದೆ ಮಾಯಾ ನಿರಾಶವಾಗಿ ಬಿಡುವುದು. ಯಾರು ಆಗುವುದೊ ಇಲ್ಲವೊ, ನನ್ನಿಂದ ಮಾಡಲು ಸಾಧ್ಯವೊ ಇಲ್ಲವೊ ಇಂತಹ ಬಲಹೀನ ಸಂಕಲ್ಪ ಮಾಡುತ್ತಾರೆ. ಇಂತಹ ಸಂಕಲ್ಪವೇ ಮಾಯೆಯನ್ನು ಆಹ್ವಾನ ಮಾಡುವುದು. ಆದ್ದರಿಂದ ಸದಾ ಉಮಂಗ-ಉತ್ಸಾಹ ಸಂಪನ್ನ ಸಾಹಸದ ಸಂಕಲ್ಪ ಮಾಡಿ ಆಗ ಹೇಳಲಾಗುವುದು ಸಾಹಸವಂತ ಆತ್ಮ.

ಸ್ಲೋಗನ್: ನಿರ್ಮಾಣಚಿತ್ತ ಆಸನದ ಮೇಲೆ ಕುಳಿತು ಜವಾಬ್ದಾರಿಯ ಕಿರೀಟ ಧಾರಣೆ ಮಾಡುವುದೇ ಶ್ರೇಷ್ಠತೆಯಾಗಿದೆ.